# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 135

2) ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸಬೇಕಾದ ದಿನಾಂಕ : 05-07-2023

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಜಿಲ್ಲೆಯಲ್ಲಿರುವ ಮೀನು ಸಾಕಾಣಿಕೆ ಕೇಂದ್ರಗಳು ಎಷ್ಟು; ಅವು ಯಾವುವು; | ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 6 ಮೀನು ಸಾಕಾಣಿಕೆ / ಪಾಲನಾ ಕೇಂದ್ರಗಳಿದ್ದು ವಿವರ ಈ ಕೆಳಗಿನಂತಿವೆ.<br>1. ಸರ್ಕಾರಿ ಮೀನುಮರಿ ಪಾಲನಾ ಕೇಂದ್ರ, ಆನೇಕಲ್.<br>2. ಸರ್ಕಾರಿ ಮೀನುಮರಿ ಪಾಲನಾ ಕೇಂದ್ರ ಹೊಸಕೋಟೆ.<br>3. ಸರ್ಕಾರಿ ಮೀನುಮರಿ ಪಾಲನಾ ಕೇಂದ್ರ ದೊಡ್ಡಬಳ್ಳಾಪುರ.<br>4. ಸರ್ಕಾರಿ ಮೀನುಮರಿ ಪಾಲನಾ ಕೇಂದ್ರ ದೇವನಹಳ್ಳಿ.<br>5. ಸರ್ಕಾರಿ ಮೀನುಮರಿ ಪಾಲನಾ ಕೇಂದ್ರ ನೆಲಮಂಗಲ<br>6. ವಿನಯ್ ಮೀನುಮರಿ ಪಾಲನಾ ಕೇಂದ್ರ, ಆಡೂರು, ಜಿಗಣಿ, ಆನೇಕಲ್ (ಖಾಸಗಿ ಮೀನುಮರಿ ಪಾಲನಾ ಕೇಂದ್ರ) |
| ಆ) | ಮೀನು ಸಾಕಾಣಿಕೆ ಕೇಂದ್ರಗಳಿಗೆ ಸರ್ಕಾರ ನೀಡುವ ಪ್ರೋತ್ಸಾಹದಾಯಕ ಯೋಜನೆಗಳು ಯಾವುವು; ಇದಕ್ಕಾಗಿ ಮೀಸಲಿಟ್ಟ ಅನುದಾನ ಎಷ್ಟು; ಯಾವ ಯಾವ ಉದ್ದೇಶಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ; | ಖಾಸಗಿ ವ್ಯಕ್ತಿಗಳು ಮೀನು ಸಾಕಾಣಿಕೆ ಕೇಂದ್ರಗಳ ನಿರ್ಮಾಣ ಮಾಡಲು ಕೇಂದ್ರ ಪುರಸ್ಕೃತ ಯೋಜನೆ ಪಿ.ಎಂ.ಎಂ.ಎಸ್.ವೈ. ಯೋಜನೆಯಡಿ ರೂ.11.00 ಲಕ್ಷ ಘಟಕ ವೆಚ್ಚದಲ್ಲಿ ಎಸ್.ಸಿ/ಎಸ್.ಟಿ/ಮಹಿಳಾ ಫಲಾನುಭವಿಗಳಿಗೆ ಶೇ.60ರಷ್ಟು ಮತ್ತು ಇತರೆ ಫಲಾನುಭವಿಗಳಿಗೆ ಶೇ.40ರಷ್ಟು ಸಹಾಯಧನ ನೀಡಲಾಗುತ್ತಿದೆ.<br><br>ಬೆಂಗಳೂರು ನಗರ ಜಿಲ್ಲೆಗೆ ಮೀನು ಸಾಕಾಣಿಕೆ ಕೇಂದ್ರಗಳ ಸ್ಥಾಪನೆಗೆ ಒಟ್ಟು ರೂ.5.28 ಲಕ್ಷ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ರೂ.1.76 ಲಕ್ಷ ಅನುದಾನವನ್ನು ಪಿ.ಎಂ.ಎಂ.ಎಸ್.ವೈ. ಯೋಜನೆಯಡಿ ಬಿಡುಗಡೆಗೊಳಿಸಲಾಗಿದೆ. |

| | | |
|---|---|---|
| ಇ) | ಸರ್ಕಾರಿ ಹಾಗೂ ಖಾಸಗಿ ಕೆರೆಗಳಲ್ಲಿ ಮೀನು ಸಾಕಾಣಿಕೆ ಮಾಡಲು ಸರ್ಕಾರ ನಿಗದಿ ಪಡಿಸಿದ ಮಾನದಂಡಗಳೇನು; ಮೀನು ಸಾಕಾಣಿಕೆಗೆ ಯಾವರೀತಿ ಅನುಮತಿ ನೀಡಲಾಗುತ್ತಿದೆ; ಗುತ್ತಿಗೆದಾರರಿಗೆ ಕೆರೆಗಳನ್ನು ಹಂಚಿಕೆ ಮಾಡುವಾಗ ಸರ್ಕಾರ ರಚಿಸಿರುವ ಮತ್ತು ಅನುಸರಿಸುವ ನಿಯಮಗಳೇನು?<br>(ವಿವರ ನೀಡುವುದು) | ಇಲಾಖಾ ವ್ಯಾಪ್ತಿಯಲ್ಲಿ ಸರ್ಕಾರಿ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಒಳನಾಡು ಮೀನುಗಾರಿಕೆ ಕಾರ್ಯನೀತಿ-2014 ರನ್ವಯ ವಿಲೇವಾರಿ ಮಾಡಲಾಗುತ್ತಿದೆ.<br><br>1. ಇಲಾಖೆಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮೂಲಕ ನೋಂದಾಯಿತ ಮೀನುಗಾರರ ಸಹಕಾರ ಸಂಘಗಳು / ಎಫ್.ಪಿ.ಒ.ಗಳಿಗೆ 05 ವರ್ಷಗಳವರೆಗೆ ಗುತ್ತಿಗೆ ನೀಡಲಾಗುವುದು.<br><br>2. ಗುತ್ತಿಗೆ ಮೂಲಕ ವಿಲೇವಾರಿಯಾಗದ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಮೂರು ಸುತ್ತಿನಲ್ಲಿ ಇ-ಟೆಂಡರ್ ಮೂಲಕ ಮೀನುಪಾಶುವಾರು ಹಕ್ಕನ್ನು ವಿಲೇಮಾಡುವ ಕೆರೆಗಳಲ್ಲಿ ಶೇಕಡ 17.15 ರಷ್ಟನ್ನು ಪರಿಶಿಷ್ಠ ಜಾತಿ ಮತ್ತು 6.95 ರಷ್ಟನ್ನು ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಮೀಸಲಾತಿ ನಿಗದಿಪಡಿಸಿ ವಿಲೇವಾರಿ ಮಾಡಲಾಗುತ್ತದೆ.<br><br>3. ನೀರು ತುಂಬದೇ ಇರುವ ಅಥವಾ ಕಾಮಗಾರಿ ಮತ್ತು ಇನ್ನಿತರೇ ಕಾರಣಗಳಿಂದ ವಿಲೇವಾರಿಯಾಗದ ಇರುವ ಕೆರೆಗಳನ್ನು ಸಕ್ಷಮ ಪ್ರಾಧಿಕಾರದಿಂದ ವಿಲೇವಾರಿ ಯಿಂದ ವಿನಾಯಿತಿ ಪಡೆಯಲಾಗುತ್ತದೆ.<br><br>ಖಾಸಗಿ ಕೆರೆಗಳಲ್ಲಿ ದೊಡ್ಡ ಗೆಂಡೆ ಮತ್ತು ಸಾಮಾನ್ಯ ಗೆಂಡೆ ಮೀನು ತಳಿಗಳನ್ನು ಸಾಕಾಣಿಕೆ ಮಾಡಲು ಇಲಾಖೆ ಯಿಂದ ಯಾವುದೇ ಅನುಮತಿ ಅವಶ್ಯಕತೆ ಇರುವುದಿಲ್ಲ, ಖಾಸಗಿ ಮೀನು ಸಾಕಾಣಿಕೆ ಕೊಳಗಳನ್ನು ನಿರ್ಮಾಣ ಮಾಡಲು ನಿಯಮಾನುಸಾರ ಸಹಾಯಧನ ನೀಡಲಾಗುವುದು ಹಾಗೂ ಇಲಾಖೆಯಿಂದ ತಾಂತ್ರಿಕ ಮಾಹಿತಿ ನೀಡಲಾಗುವುದು.<br><br>ಒಂದು ವೇಳೆ ಖಾಸಗಿ ಕೆರೆ / ಮೀನು ಸಾಕಾಣಿಕೆ ಕೊಳಗಳಲ್ಲಿ ವಿದೇಶಿ ಮೀನು ತಳಿಗಳನ್ನು ಸಾಕಾಣಿಕೆ ಮಾಡಲು ಬಯಸಿದರೆ, ಇಲಾಖೆಯಿಂದ ನಿಯಮಾನುಸಾರ ಅನುಮತಿ ಪಡೆಯಬೇಕಾಗುತ್ತದೆ. |

ಸಂಖ್ಯೆ: ಪಸಂಮೀ ಇ-93 ಮೀಇಯೋ 2023

(ಮಂಕಾಳ ಎಸ್.ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು